ಇ) 1) ಸರ್ಕಾರಿ ರೇಷ್ಮೆ ಕಾರ್ಖಾನೆಗಳು ಮತ್ತು ಕೆ.ಎಸ್.ಐ.ಸಿ.ಗೂಡನ್ನು ಕರ್ನಾಟಕ ರೇಷ್ಮೆ ಮಾರಾಟ ಮಂಡಳಿಯು ರೇಷ್ಮೆಯನ್ನು ಖರೀದಿಸುವುದರ ಮೂಲಕ ಬೆಲೆಯನ್ನು ಸ್ಥಿರೀಕರಿಸಲಾಗುತ್ತಿದೆ.

2) ರೇಷ್ಮೆ ಆಮದು ನೀತಿಯನ್ನು ಹಿಂದಕ್ಕೆ ಪಡೆಯಲು ಕೇಂದ್ರ ಸರ್ಕಾರವನ್ನು ಒತ್ತಾಯಿಸಲಾಗುತ್ತಿದೆ.

ಸಕಲೇಶಪುರ ಪುರಸಭೆಯ ಮುಖ್ಯಾಧಿಕಾರಿಯ ಅಮಾನತ್ತು.

108(319) ಶ್ರೀ ಬಿ.ಬಿ. ಶಿವಪ್ಪ, (ಸಕಲೇಶಪುರ) ಮಾನ್ಯ ಪೌರಾಡಳಿತ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸಕಲೇಶಪುರದ ಪುರಸಭೆಯಲ್ಲಿ ಇತ್ತೀಚೆಗೆ ಕಾರ್ಯ ನಿರ್ವಹಿಸುತ್ತಿದ್ದ ಮುಖ್ಯಾಧಿಕಾರಿಯವರು ಯಾವ ಯಾವ ಅಪರಾಧಗಳ ಹಿನ್ನೆಲೆಯಲ್ಲಿ ಅಮಾನತ್ತಿಗೆ ಒಳಪಟ್ಟಿರುತ್ತಾರೆ?

ಆ) ಸದರಿ ಅಧಿಕಾರಿಯು ಅಧಿಕಾರ ದುರುಪಯೋಗದ ಬಗ್ಗೆ ಸರ್ಕಾರ ಯಾವ ಕ್ರಮಗಳನ್ನು ಕೈಗೊಂಡಿದೆ?

ಶ್ರೀ ಡಿ. ನಾಗರಾಜಯ್ಯ (ರೇಷ್ಮೆ ರಾಜ್ಯ ಸಚಿವರು) :—

ಅ) ಸಕಲೇಶಪುರ ಪುರಸಭೆಯ ಮುಖ್ಯಾಧಿಕಾರಿಯವರು ಅಕ್ರಮ ಸಂಭಾವನೆ ಪಡೆಯುತ್ತಿದ್ದಾಗ ಲೋಕಾಯುಕ್ತ ಪೋಲೀಸರ ಜಾಲಕ್ಕೆ ಸಿಕ್ಕಿಬಿದ್ದ ಪ್ರಯುಕ್ತ ಅವರನ್ನು ಅಮಾನತ್ತುಗೊಳಿಸಲು ಲೋಕಾಯುಕ್ತ ಕಛೇರಿಯ ಬ್ಯೂರೋ ಆಫ್ ಇನ್ವೆಸ್ಟಿಗೇಷನ್ ಘಟಕದ ಮುಖ್ಯಸ್ಥರು ವರದಿ ಮಾಡಿದಂತೆ ಅವರನ್ನು ಲೋಕಾಯುಕ್ತದಿಂದ ತನಿಖೆಗೆ ನಡೆಯುವುದನ್ನು ಬಾಕಿ ಇಟ್ಟು ಪೌರಾಡಳಿತ ನಿರ್ದೇಶಕರು ದಿನಾಂಕ: 5-3-99ರಂದು ಅಮಾನತ್ತುಗೊಳಿಸಿರುತ್ತಾರೆ.

ಆ) ಮೇಲಿನಂತೆ ಉತ್ತರಿಸುತ್ತಾ, ಹಾಗೂ ಸದರಿಯವರು ಹಿಂದೆ ತೀರ್ಥಹಳ್ಳಿ ಪಟ್ಟಣ ಪಂಚಾಯತಿಯಲ್ಲಿ ಕೆಲಸ ನಿರ್ವಹಿಸುತ್ತಿದ್ದಾಗ ಅಧಿಕಾರ ದುರುಪಯೋಗ ಕುರಿತಂತೆ ವಿಚಾರಣಾಧಿಕಾರಿಗಳನ್ನು ನೇಮಕ ಮಾಡಲಾಗಿದೆ. ಇಲಾಖಾ ವಿಚಾರಣೆ ನಡೆಯುತ್ತಿದೆ.